ಪದಬಂಧ




ಎಡದಿಂದ ಬಲಕ್ಕೆ

1. ಪ್ರವಾಸ ಹೇಗಿದ್ದರೇನು? ಉದ್ದಕ್ಕೂ ಬರೀ ನಿರಶನ 4
3. ವಾದ್ಯಗಳ ಬಳಕೆಯ ವಿಧಾನ ಕುರಿತು ತೀವ್ರ ಚರ್ಚೆ, ವಾಗ್ಯುದ್ಧ 3
4. ಚೋರನ ಮನೆಯಲ್ಲಿ ಜಿಂಕೆ ರೂಪದ ರಕ್ಕಸ 3
6. ಗಾಯನದಲ್ಲಿ ಯಕ್ಷನೂ ಕಾಲಿಟ್ಟರೆ ಅದೆಂಥ ಹಾಡು? 4
7. ಕೆಟ್ಟ ಕಂಟಕ ತಂದವ ನ್ಯಾಯಾಲಯದ ಕಟ್ಟೆ ಏರಿದ 4
8. ಕೊರಕಲಿನಲ್ಲಿ ಕಾಲಿಟ್ಟು ಬಿದ್ದ ಆ ಕಚೇರಿಯ ಗುಮಾಸ್ತ 4
10. ವರ್ತಕರಿಗೆ ತಿಳಿದಿರುವ ವ್ಯಾಪಾರೀ ತಂತ್ರಗಳು ಬಗೆ ಬಗೆ 4
12. ವ್ಯಾಪಾರವಿರಲಿ ಬಿಡಲಿ, ಕಡಲನ್ನಂತೂ ಕಾಣಲೇಬೇಕು 4
14. ಕರೀ ಬಣ್ಣದ ಛತ್ರಿಗಳ ಬಳಕೆ ಈಗ ಐತಿಹಾಸಿಕ 4
16. ಕರ್ತವ್ಯವನ್ನು ತಿರಸ್ಕರಿಸಿದ್ದಕ್ಕೆ ಹೀಗೆ ಅಲೆಮಾರಿಯಾದ 3
17. ಡಂಬಾಚಾರ ತುಂಬಿದ ಊರಲ್ಲಿ ಕ್ಷಾಮದ ಜೊತೆಗಾರ ಬೇರೆ 3
18. ರಣಭೇರಿ ಬಾರಿಸುತ್ತಿದ್ದವನ ಮೇಲೆ ಈಗ ಸಾಲದ ಹೊರೆ 4

ಮೇಲಿನಿಂದ ಕೆಳಕ್ಕೆ

1. ವಿದ್ಯೆಯನ್ನು ನೀಡುವ ಹೊಸ ಕ್ರಮದ ಹುಟ್ಟು 3
2. ಮಾಸಾಶನ ಪಡೆಯುವವರಲ್ಲಿ ಯಾರೂ ಹೆಚ್ಚಿಲ್ಲ, ಕಡಿಮೆಯಿಲ್ಲ 3
3. ಆ ವೇಷಕ್ಕೆ ಕೈ ಹಚ್ಚಿದರೆ ಅದೇ ಪ್ರಾಣಹಾರಕವಾದೀತು! 4
5. ಚೋರರ ಕೈಗೆ ಸಿಕ್ಕಿದ್ದು ಹೇಗೆ ಈ ಕಾಲ್ಪನಿಕ ಹಕ್ಕಿ? 3
7. ತಾಳಕ್ಕೆ ತಕ್ಕಂತಿಲ್ಲ ಎಂದರೆ ದೋಷಯುಕ್ತವೇ ಹೌದು 4
9. ವಿರಾಟನ ಪಾತ್ರದಲ್ಲಿ ಬಂದಿರುವಾತ ಒಬ್ಬ ಅಭಿನಯ ಶ್ರೇಷ್ಠ 4
11. ಆಕೆ ದೇವತೆಯಂತೆ ಇದ್ದಾಳೆಂಬುದು ಕೇವಲ ಗಾಳಿ ಸುದ್ದಿ 3
13. ಈ ನೂರಾರು ಕಾರ್ಮಿಕರನ್ನು ಕಾಪಾಡಲು ರೂಪಾಕಾರ ರಹಿತ ದೇವರೇ ಬೇಕು 4
14. ಚಿಕ್ಕವರಿಗೆಲ್ಲ ಸೂಕ್ತವಲ್ಲ ಈ ದುಡಿಮೆ 3
15. ಕಡೆಯ ವರೆಗೂ ಕಾದ ನಂತರ ಸಿಕ್ಕಿದ್ದು ಈ ಹಂಡೆ 3

## 15–09–2022 ಉತ್ತರಗಳು

ಎಡದಿಂದ ಬಲಕ್ಕೆ

1. ಅನಿತ್ಯ 3. ಪ್ರಲಾಪ 4. ಜಿಜ್ಞಾಸು 6. ತಲಾಂತರ 7. ಚಲಪತಿ 9. ಕಲ್ಪತರು 11. ಸಹಸ್ರಾರು 15. ಕುಶಾಲು 16. ನಂಬುಗೆ 17. ಮೆದುಗ

ಮೇಲಿನಿಂದ ಕೆಳಕ್ಕೆ

1. ಅಪಕ್ವ 2. ತ್ಯಜಿಸು 3. ಪ್ರಭಾತ 5. ಸುಶೀಲ 6. ತವಕ 8. ತಿಮಿರು 10. ತದಕು 12. ಹಲಗೆ 13. ಒಲುಮೆ 14. ಅನಂಗ (=ಮನ್ಮಥ)

ಪ್ರಶ್ನಾಂಕಣ

# ಮೆಗಲೊಡಾನ್: ಅದೆಂಥ ಜೀವಿ?

ಮೆಗಲೊಡಾನ್ ಅದೊಂದು ಸಾಗರ ಪ್ರಾಣಿ. ಧರೆಯ ಸಾಗರಾವಾರದಲ್ಲಿ ಪ್ರಸಿದ್ಧ ಶಾರ್ಕ್‌ಗಳ ವರ್ಗಕ್ಕೇ ಸೇರಿದ ಆದರೆ ಸಂಪೂರ್ಣ ಅಳಿದುಹೋಗಿರುವ ಪ್ರಾಣಿ ಅದು. ಮೆಗಲೊಡಾನ್‌ನ ಪರಮ ವೈಶಿಷ್ಟ್ಯ ಏನೆಂದರೆ, ಅದರಷ್ಟು ದೈತ್ಯ ಗಾತ್ರದ, ರಕ್ಕಸ ಶಕ್ತಿಯ ಬೇಟೆಗಾರ ಪ್ರಾಣಿ ಯಾವುದೂ ಹಿಂದೆಂದೂ ಇರಲಿಲ್ಲ; ಈಗಲೂ ಇಲ್ಲ! (ಮೆಗಲೊಡಾನ್‌ಗಳಿಗಿಂತ ಕೋಟ್ಯಂತರ ವರ್ಷ ಹಿಂದೆಯೇ ಧರೆಯಲ್ಲಿ ಕಿಕ್ಕಿರಿದಿದ್ದ ಮತ್ತು ಅಳಿದೂ ಹೋದ ಡೈನೋಸಾರ್‌ಗಳಲ್ಲೂ ಯಾವ ಬೇಟೆಗಾರ ಪ್ರಭೇದವೂ ಮೆಗಲೋಡಾನ್‌ಗಳಷ್ಟು ದೈತ್ಯ ಗಾತ್ರ ಪಡೆದಿರಲಿಲ್ಲ) ಹಾಗೆ ಪರಮ ದೈತ್ಯ ಬೇಟೆಗಾರ ಎಂಬ ಸಾರ್ವಕಾಲಿಕ ದಾಖಲೆಯ ಈ ಪ್ರಾಣಿ ಅವತರಿಸಿದ್ದು ಈಗ್ಗೆ ಸಮೀಪ 20 ದಶಲಕ್ಷ ವರ್ಷ ಹಿಂದೆ. ಅಲ್ಲಿಂದ ಮುಂದೆ 13 ದಶಲಕ್ಷ ವರ್ಷ ಕಾಲ ಸಾಗರ ಸಾಮ್ರಾಜ್ಯವನ್ನೇ ಆಳಿದ ಮೆಗಲೊಡಾನ್‌ಗಳು ಆ ನಂತರ ಅಳಿವ ಹಾದಿ ಹಿಡಿದು ಈಗ್ಗೆ 3.6 ದಶ ಲಕ್ಷ ವರ್ಷ ಹಿಂದಿನ ವೇಳೆಗೆ ಸಂಪೂರ್ಣ ನಿರ್ನಾಮವಾದುವು.

ಅತ್ಯಂತ ದೈತ್ಯ ಶಾರ್ಕ್, ಹಾಗೆಂದರೆ ಅತ್ಯಂತ ದೈತ್ಯ ಮತ್ಸ್ಯ ಕೂಡ ಎಂಬ ದಾಖಲೆಯನ್ನು ಹೊಂದಿರುವ ಮೆಗಲೊಡಾನ್‌ಗಳ ಗಾತ್ರ ತೂಕಗಳನ್ನು ಕಲ್ಪಿಸಿಕೊಳ್ಳುವುದೂ ಸುಲಭವಲ್ಲ. ಈಗಿನ ಬಹು ದೊಡ್ಡ ಶಾರ್ಕ್‌ಗಳಾದ ವ್ಹೇಲ್ ಶಾರ್ಕ್ (ಚಿತ್ರ 1), ಬ್ಲೂ ಶಾರ್ಕ್ (ಚಿತ್ರ 2), ದಿ ಗ್ರೇಟ್ ವೈಟ್ ಶಾರ್ಕ್ (ಚಿತ್ರ 3) ಗಳೂ ಮೆಗಲೊಡಾನ್‌ನ ಮುಂದೆ ಕೇವಲ ವಾಮನ ಮೂರ್ತಿಗಳಷ್ಟೆ! ವಯಸ್ಕ ಮೆಗಲೊಡಾನ್‌ಗಳ ಉದ್ದ 35 ರಿಂದ 60 ಅಡಿ; ತೂಕ 50 ರಿಂದ 70 ಟನ್!




ಸಹಜವಾಗಿಯೇ ಮೆಗಲೊಡಾನ್‌ಗಳು ಬೇಟೆಯಾಡುತ್ತಿದ್ದಿದ್ದೂ ಭಾರೀ ಗಾತ್ರದ ಬಲಿ ಪ್ರಾಣಿಗಳನ್ನೇ. ಅವುಗಳ ಪ್ರಧಾನ ಆಹಾರ ತಿಮಿಂಗಿಲಗಳು ಮತ್ತು ಇತರ ಶಾರ್ಕ್‌ಗಳೇ ಆಗಿದ್ದುವು. ಅದಕ್ಕೆ ಅನುವಾಗುವಂತೆಯೇ ಮೆಗಲೊಡಾನ್ ಎಂಟು ಅಡಿ ಅಗಲಕ್ಕೆ ಮತ್ತು ಹತ್ತು ಅಡಿ ಎತ್ತರಕ್ಕೆ ಬಾಯ್ದೆರೆಯಬಲ್ಲದ್ದಾಗಿತ್ತು! ಅದರದು 276 ಹಲ್ಲುಗಳ ದಂತಪಂಕ್ತಿ; ಪ್ರತಿ ಹಲ್ಲಿನದೂ 7 ಅಂಗುಲ ಉದ್ದ; ಹರಿತವಾದ ಚೂರಿಯಂತಹ ನಿರ್ಮಿತಿ; ಎಷ್ಟೇ ದೈತ್ಯ ಪ್ರಾಣಿಯನ್ನೂ ಒಂದೇ ಅಗಿತಕ್ಕೆ ತುಂಡರಿಸಬಲ್ಲ ದವಡೆ ಶಕ್ತಿ! ಈಗ್ಗೆ ನಾಲ್ಕು ಐದು ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಧರೆಗೆ ಶೀತ ಮುಸುಕತೊಡಗಿತ್ತು. ಕ್ರಮೇಣ ತೀವ್ರಗೊಂಡ ನಿರಂತರ ಚಳಿಯನ್ನು ಸಹಿಸಲಾರದೆ ಆಗಿನ ಜೀವಜಾಲದ ಶೇಕಡ 30ರಿಂದ 40ರಷ್ಟು ಪ್ರಾಣಿ ಪ್ರಭೇದಗಳು ಅಳಿದುಹೋದುವು. ತತ್ಪರಿಣಾಮವಾಗಿ, ಆಹಾರದ ಅಭಾವ ಉಂಟಾಗಿ ಅದೇ ಕಾರಣದಿಂದಲೇ ಎಲ್ಲ ಮೆಗಲೊಡಾನ್‌ಗಳೂ ನಿರ್ನಾಮವಾದುವು.

■ ಎನ್. ವಾಸುದೇವ್